**ಗೌರವಾನ್ವಿತ 2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.**

**O.S.No.** 902/2015

**PW**-1

ದಿಃ-07-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ.M.M.S ವಕೀಲರಿಂದ 3 ನೇ ಪ್ರತಿವಾದಿ ಪರವಾಗಿ.**

1. 3 ನೇ ಪ್ರತಿವಾದಿಯು ನಾನು ಮತ್ತು 1 ನೇ ವಾದಿ ದಾವಾ ಸ್ವತ್ತಿನ ಮಾಲೀಕರು ಅಲ್ಲ ಎಂದು ಎಂದೂ ಪ್ರಶ್ನಿಸಿಲ್ಲ. ಹಿಂದಿನ ಯಾವುದೇ ದಾವೆಗಳಲ್ಲಿಯೂ ಸಹ 3 ನೇ ಪ್ರತಿವಾದಿ ನಮ್ಮ ಮಾಲೀಕತ್ವದ ಬಗ್ಗೆ ಪ್ರಶ್ನಿಸಿಲ್ಲ ಎಂದರೆ ಸರಿ.

2. ನನಗೆ ಸೇರಿದ ಸ್ವತ್ತಿನಲ್ಲಿ ಗ್ಯಾಸ ಏಜೆನ್ಸಿಯ godown ಹೊಂದಿರುತ್ತೇನೆ. 1 ನೇ ವಾದಿಗೆ ಸೇರಿದ ಸ್ವತ್ತಿನಲ್ಲಿ auto mobile painting and denting work shop ಇದೆ ಎಂದರೆ ಸರಿ. ನನ್ನ ಸ್ವತ್ತಿನ ಮತ್ತು 3 ನೇ ಪ್ರತಿವಾದಿಯ ಶಾಲೆಯ ನಡುವೆ 1 ನೇ ವಾದಿಗೆ ಸೇರಿದ ಸ್ವತ್ತು ಇದೆ ಎಂದರೆ ಸರಿ. ಗ್ಯಾಸ ಏಜೆನ್ಸಿಯ godown ನಡೆಸುವಾಗ fire safety norms ನ್ನು ಪಾಲಿಸಬೇಕಾಗುತ್ತದೆ ಎಂದರೆ ಸರಿ. ಅದೇ ರೀತಿ fire safety department ನಿಂದ ಅನುಮತಿ ಸಹ ಪಡೆಯಬೇಕಾಗುತ್ತದೆ ಎಂದರೆ ಸರಿ. ಆ ರೀತಿ ಅನುಮತಿಯನ್ನು ನಾನು ಪಡೆದಿದ್ದು, ನನ್ನ ಬಳಿ ಇರುತ್ತದೆ. ಆ ರೀತಿ ಅನುಮತಿ ಪಡೆದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ

ಸಾಕ್ಷಿಯು ಹಾಜರುಪಡಿಸಿರುವುದಾಗಿ ನುಡಿಯುತ್ತಾರೆ. ಆ ರೀತಿ ದಾಖಲೆಯನ್ನು ನಾನು ಹಾಜರುಪಡಿಸಿಲ್ಲದೆ ಇದ್ದರೂ ಸಹ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಮಗೆ ಸೇರಿದ ಸ್ವತ್ತನ್ನು ಹೊರತುಪಡಿಸಿ ಬೇರೆ ಅಕ್ಕಪಕ್ಕದ ಸ್ವತ್ತುಗಳೆಲ್ಲಾ KIADB ರವರಿಗೆ ಸೇರಿರುತ್ತದೆ ಎಂದರೆ ಸರಿ. ನಮ್ಮ ಸ್ವತ್ತು ಇರುವ ಏರಿಯಾದಲ್ಲಿ marriot hotel ಸಹ ಇರುತ್ತದೆ ಎಂದರೆ ಸರಿ. Marriot hotel ಇರುವ ಜಾಗವನ್ನು KIADB ರವರು ಮಂಜೂರು ಮಾಡಿರುತ್ತಾರೆ ಎಂದರೆ ಸರಿ. KIADB ಈ ದಾವೆಯ 2 ನೇ ಪ್ರತಿವಾದಿ ಎಂದರೆ ಸರಿ. Marriot hotel ಹಿಂಭಾಗದ ಏರಿಯಾದಲ್ಲಿ starline motors ಇತ್ತು ಎಂದರೆ ಸರಿ. starline motors ಹತ್ತಿರ jolle group of hotels and Hospitalities ರವರ ಹೋಟೆಲ್ ಬರುತ್ತಿದೆ ಎಂದರೆ ಸರಿ. ಸದರಿ ಹೋಟೆಲ ಮಾಡುತ್ತಿರುವ ಜಾಗವು KIADB ರವರ ವ್ಯಾಪ್ತಿಗೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.

4. ಬೆಳಗಾವಿ ಜಿಲ್ಲೆಯಲ್ಲಿ KIADB ಗೆ ಸೇರಿದ ಜಾಗಗಳು ಬೇರೆ ಬೇರೆ ಏರಿಯಾದಲ್ಲಿ ಇವೆ ಎಂದರೆ ಸರಿ. ನಾನು ಸದರಿ ಏರಿಯಾಗಳ ಪೈಕಿ ಕೆಲವೊಂದು ಏರಿಯಾಗಳಿಗೆ ಹೋಗಿರುತ್ತೇನೆ. ನಾನು ಆಟೋ ನಗರ ಏರಿಯಾಗೆ ಹೋಗಿರುತ್ತೇನೆ. ಉದ್ಯಮಬಾಗನಲ್ಲಿ ಇರುವ foundry cluster ಕಟ್ಟಡಕ್ಕೆ ನಾನು ಎಂದಿಗೂ

ಹೋಗಿರುವುದಿಲ್ಲ. ಆಟೋ ನಗರ ಏರಿಯಾದಲ್ಲಿ ಸಾಕಷ್ಟು ಶಾಲೆಗಳು ಬಂದಿದೆ ಎಂದರೆ ನನಗೆ ಗೊತ್ತಿಲ್ಲ.

5. ನನ್ನ ಮಾವ ಮತ್ತು ನನ್ನ ಭಾಮೈದುನ ರಾಜಕೀಯದಲ್ಲಿದ್ದರು ಎಂದರೆ ಸರಿ. ಮತ್ತೊಬ್ಬ ರಾಜಕೀಯ ಮುತ್ಸದ್ದಿಯಾದ ಎಸ್.ಬಿ ಸಿದ್ನಾಳ ರವರು ನನ್ನ ಮಾವನವರ contemporary ಆಗಿದ್ದರು ಎಂದರೆ ಸರಿ. ನನ್ನ ಮಾವ, ಭಾಮೈದುನ ಮತ್ತು ಎಸ್.ಬಿ ಸಿದ್ನಾಳ ರವರು ವಕೀಲರು ಸಹ ಆಗಿದ್ದರು ಮತ್ತು ಅವರ ನಡುವೆ ಸ್ನೇಹ ಸಂಬಂಧ ಚೆನ್ನಾಗಿತ್ತು ಎಂದರೆ ಸರಿ. ಮತ್ತು ಒಬ್ಬರ ಮನೆಗೆ ಮತ್ತೊಬ್ಬರು ಹೋಗುತ್ತಿದ್ದರು ಎಂದರೆ ಸರಿ. ಎಸ್.ಬಿ ಸಿದ್ನಾಳ ಮತ್ತು ಅವರ ಮಕ್ಕಳು ಆಟೋ ನಗರದಲ್ಲಿ ಉದಯ ಇಂಗ್ಲಿಷ್ ಮೇಡಿಯಂ ಸ್ಕೂಲ ನಡೆಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಆ ಬಗ್ಗೆ ತಿಳಿದಿದ್ದರೂ ಸಹ ತಿಳಿದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಾನು KIADB Act ಓದಿ ತಿಳಿದುಕೊಂಡಿರುತ್ತೇನೆ. KIADB ಯಿಂದ ಹೊರಡಿಸುವ ನೋಟಿಫಿಕೇಶನಗಳನ್ನು ನಾನು ನೋಡುವುದಿಲ್ಲ. ನೀವು Industrialist ಆಗಿರುವುದರಿಂದ KIADB ಯಿಂದ ಹೊರಡಿಸುವ ನೋಟಿಫಿಕೇಶನಗಳನ್ನು ಸಹಜವಾಗಿ ನೋಡುತ್ತೀರಾ ಎಂದರೆ ಸಾಕ್ಷಿಯು ತನ್ನ ವ್ಯವಹಾರಕ್ಕೆ ಸಂಬಂಧಿಸಿದ ನೋಟಿಫಿಕೇಶನಗಳನ್ನು ಮಾತ್ರ ನೋಡುವುದಾಗಿ ನುಡಿಯುತ್ತಾರೆ.

7. ನಾನು ಖರೀದಿಸಿದ ಸ್ವತ್ತನ್ನು ಯಾರು ಲೇಔಟ್ ಮಾಡಿರುತ್ತಾರೆ ಎಂದು ಗೊತ್ತಿಲ್ಲ ಆದರೆ ನಾನು ಖರೀದಿಸುವ ಹೊತ್ತಿಗೆ ಅದು ಲೇಔಟ್ ಆಗಿತ್ತು. ಸಾಮಾನ್ಯವಾಗಿ ಲೇಔಟ್ ಡಿಮಾರ್ಕ ಮಾಡುವಾಗ ಲೇಔಟ್ ಪ್ಲಾನ ಇರಬೇಕು ಎಂದರೆ ಸಾಕ್ಷಿಯು ತಾನು ಸ್ವತ್ತು ಖರೀದಿ ಮಾಡುವಾಗ ಆ ರೀತಿ procedure ಅಸ್ತಿತ್ವದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಆ ರೀತಿ procedure ಅಸ್ತಿತ್ವದಲ್ಲಿ ಇರಲಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಖರೀದಿಸಿದ ಸ್ವತ್ತು ಮಾತ್ರ ಎನ್.ಎ ಲೇಔಟ್ ಆಗಿಲ್ಲ ಪೂರ್ಣ ಸರ್ವೆ ನಂಬರ ಲೇಔಟ್ ಆಗಿರುತ್ತದೆ. ನಮ್ಮ ಸ್ವತ್ತಿನ ಅಕ್ಕಪಕ್ಕ ಬೇರೆ ಬೇರೆಯವರಿಗೆ ಸೇರಿದ ಸ್ವತ್ತುಗಳು ಇವೆ ಎಂದರೆ ಸರಿ. ನಿಮ್ಮ ಸ್ವತ್ತಿನ ಹಿಂಭಾಗದಲ್ಲಿ residential buildings ಇದ್ದು, ಜನ ವಾಸಿಸುತ್ತಾರೆ ಎಂದರೆ ಸಾಕ್ಷಿಯು ಅಲ್ಲಿ ಜನ ಓಡಾಡುವುದನ್ನು ನೋಡಿದ್ದು, ವಾಸಿಸುವ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಸ್ವತ್ತಿನ ಹಿಂಭಾಗದಲ್ಲಿ RCC ಮತ್ತು tin shed ಗಳು ಇರುತ್ತವೆ.

8. ನಿಮ್ಮ ಸ್ವತ್ತಿನ ಮುಂಭಾಗದಲ್ಲಿರುವ ರಸ್ತೆಯು ಶಾಲೆಯ ಹಿಂಭಾಗದ Backyard ಗೆ connect ಮಾಡುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಮ್ಮ ಸ್ವತ್ತಿನ ಮುಂಭಾಗದಲ್ಲಿ ರಸ್ತೆ ಇದ್ದು, ಹಿಂಭಾಗದಲ್ಲಿ ಇಲ್ಲ. ಸದರಿ ರಸ್ತೆಗೆ ಸಂಬಂಧಿಸಿದಂತೆ 3 ನೇ ಪ್ರತಿವಾದಿಯ ವಿರುದ್ಧ ಹೊಸದಾಗಿ ಗೇಟ್ ಹಾಕಬಾರದೆಂದು ಶಾಶ್ವತ ನಿರ್ಭಂತಕಾಜ್ಞೆ ಕೋರಿ I Addl Civil Judge & JMFC

ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 590/2019 ಹೂಡಿರುತ್ತೇನೆ ಎಂದರೆ ಸರಿ. ಈ ದಾವೆಯನ್ನು ಹೂಡಿದಾಗ ಅಂದರೆ 2015 ರಲ್ಲಿ ಆ ರೀತಿ ಗೇಟ್ ಇರಲಿಲ್ಲ. ಸಾಕ್ಷಿಯು ಮುಂದುವರೆದು ತನ್ನ ಸ್ವತ್ತಿನ ಮುಂಭಾಗ ಆ ರೀತಿ ಗೇಟ್ 2015 ರಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ಸ್ವತ್ತಿನ ಮುಂಭಾಗ ಇರುವ ರಸ್ತೆಯು 3 ನೇ ಪ್ರತಿವಾದಿ ಶಾಲೆಯ ಬಳಿ ಮುಗಿಯುತ್ತದೆ ಅಂದರೆ land lock ಆಗುತ್ತದೆ ಎಂದರೆ ಸರಿ. ಆ ರೀತಿ land lock ಆಗುವ ಕಾರಣ ಅಲ್ಲಿ ಮಕ್ಕಳು ಓಡಾಡುವ ಪ್ರಮೇಯ ಬರುವುದಿಲ್ಲ.

**3 ನೇ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ/-**

**2 ನೇ ಹೆಚ್ಚುವರಿ ನ್ಯಾಯಾಲಯ ಮತ್ತು**
**ಜೆ ಎಮ್ ಎಫ್ ಸಿ, ಬೆಳಗಾವಿ**